ಧಾರವಾಡ ಜಿಲ್ಲೆಯಲ್ಲಿ ಕಲಾಭವನಗಳ ನಿರ್ಮಾಣ

80 (1538) ಶ್ರೀ ಅಕ್ಕಿ ಮಲ್ಲಿಕಾರ್ಜುನ ಸಹದೇವಪ್ಪ (ಕುಂದಗೋಳ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಧಾರವಾಡ ಜಿಲ್ಲೆಯಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಕಟ್ಟಿಸಿದ ಕಲಾ ಭವನಗಳ ಸಂಖ್ಯೆ ಎಷ್ಟು?

ಆ) ಈ ವರ್ಷ ಇಲಾಖೆಯಲ್ಲಿ ಧಾರವಾಡ ಜಿಲ್ಲೆಗೆ ಬಿಡುಗಡೆಯಾದ ಹಣ ಎಷ್ಟು?

ಶ್ರೀ ಎನ್ ಧರ್ಮಸಿಂಗ್ (ಮುಖ್ಯ ಮಂತ್ರಿಗಳು)

ಅ) ಧಾರವಾಡದಲ್ಲಿನ ಕರ್ನಾಟಕ ವಿದ್ಯಾರ್ಥಿಗಳ ಸಂಘದಲ್ಲಿನ ರಾ.ಹ. ದೇಶಪಾಂಡೆ ಸಭಾಂಗಣ ಡಾ: ಪಾಟೀಲ್ ಪುಟ್ಟಪ್ಪ ಸಭಾಭವನ ಕರ್ನಾಟಕ ವಿಶ್ವವಿದ್ಯಾಲಯದಲ್ಲಿನ ಗಾಂಧಿಭವನ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿನ ಡಾ: ಮಲ್ಲಿಕಾರ್ಜುನ ಮನ್ಸೂರ ಕಲಾಭವನ, ಕನ್ನಡ ಸಾಹಿತ್ಯ ಪರಿಷತ್ತಿನ ಸಾಹಿತ್ಯ ಭವನ ಮತ್ತು ಕರ್ನಾಟಕ ಕಾಲೇಜಿನಲ್ಲಿನ ಶಿರೂರು ಕಲಾಭವನ ಬಸವರಾಜ ರಾಜಗುರು ಬಯಲು ರಂಗಮಂದಿರ ಇವುಗಳು ನಡೆಯುವ ಸಾಂಸ್ಕೃತಿಕ ಕಾರ್ಯಕ್ರಗಳಿಗೆ ಲಭ್ಯವಿದೆ ಹುಬ್ಬಳ್ಳಿಯಲ್ಲಿ ಸವಾಯಿ ಗಂಧರ್ವ ಕಲಾಮಂದಿರ ಮತ್ತು ಮರಾಠ ಮಂದಿರ ಕಲಾಭವನ ಸಹಾ ಕಾರ್ಯನಿರ್ವಹಿಸುತ್ತಿವೆ.

ಆ) ಇದಲ್ಲದೆ ಬಯಲು ರಂಗಮಂದಿರ ನಿರ್ಮಾಣ ಯೋಜನೆಯಡಿ, ಮಾಳ ಮಡ್ಡಿಯಲ್ಲಿ ಬಯಲು ರಂಗಮಂದಿರ ನಿರ್ಮಾಣಕ್ಕೆ ಮೊದಲ ಕಂತಾಗಿ 50,000–00 ಮತ್ತು ಜಿಲ್ಲೆಯ ವಿವಿಧ ಪ್ರದೇಶಗಳಲ್ಲಿ 7 ಬಯಲು ರಂಗಮಂದಿರಗಳನ್ನು ನಿರ್ಮಿಸಲು 4,00,000–00 ಒಟ್ಟು ಸಹಾಯಧನ ನೀಡಿದೆ.

ಶ್ರೀ ಅಕ್ಕಿಮಲ್ಲಿಕಾರ್ಜುನ ಸಹದೇವಪ್ಪ : ಮಾನ್ಯ ಅಧ್ಯಕ್ಷರೆ, ಕನ್ನಡ ಸಂಸ್ಕೃತಿ ಇಲಾಖೆಯಿಂದ ಕಟ್ಟಿಸಿದ ಕಲಾ ಭವನಗಳು ಕೇವಲ ಪಟ್ಟಣ ಪ್ರದೇಶಕ್ಕೆ ಸಂಬಂಧಪಟ್ಟಿಲ್ಲ, ಇದು ಎಲ್ಲಾ ಗ್ರಾಮೀಣ ಪ್ರದೇಶಕ್ಕೂ ಸಂಬಂಧಪಡುತ್ತದೆ. ಪ್ರಶ್ನೆಗೆ ಹುಬ್ಬಳ್ಳಿ ಧಾರವಾಡದಲ್ಲಿ ಕಲಾ ಭವನವನ್ನು ಕಟ್ಟಿದ್ದೇವೆಂದು ಉತ್ತರ ಕೊಟ್ಟಿದ್ದೀರಿ. ಇವತ್ತು ಕನ್ನಡ ಮತ್ತು ಸಂಸ್ಕೃತಿ ಉಳಿಯಬೇಕಾದರೆ ಗ್ರಾಮೀಣ ಪ್ರದೇಶದಲ್ಲಿ ಇಂಥ ಸಂಸ್ಕೃತಿಯ ಕಲಾ ಭವನಗಳನ್ನು ಕಟ್ಟಬೇಕಾಗಿದೆ. ಶಾಸಕರ ಅನುದಾನದಲ್ಲಿ ಕಲಾ ಭವನವನ್ನು ನಾವು ಕಟ್ಟಬಹುದಿತ್ತು. ಆದರೆ ಈಗ ಶಾಸಕರ ಅನುದಾನವನ್ನೂ ಬಂದ್ ಮಾಡಿದ್ದೀರಿ. ಕಲಾ ಭವನಗಳನ್ನು ಗ್ರಾಮೀಣ ಪ್ರದೇಶದಲ್ಲಿ ಮಾಡಿದರೆ ಗ್ರಾಮೀಣ ಭಾಗದಲ್ಲಿರುವ ಕಲಾವಿದರಿಗೆ ಅನುಕೂಲ ಮಾಡಿಕೊಟ್ಟಂತೆ ಆಗುತ್ತದೆ. ಗ್ರಾಮೀಣ ಪ್ರದೇಶದಲ್ಲಿ ಆ ರೀತಿ ಕಲಾ ಭವನ ಕಟ್ಟಲು ಹಣವನ್ನು ಬಿಡುಗಡೆ ಮಾಡಬೇಕೆಂದು ಮಾನ್ಯ ಮುಖ್ಯಮಂತ್ರಿಗಳಲ್ಲಿ ಕೇಳುತ್ತಿದ್ದೇನೆ.

ಶ್ರೀ ಧರ್ಮಸಿಂಗ್ : ಮಾನ್ಯ ಅಧ್ಯಕ್ಷರೆ, ಧಾರವಾಡ ಜಿಲ್ಲೆಯಲ್ಲಿ ಕಲಾಭವನದ ಬಗ್ಗೆ ಕೇಳಿದ್ದಾರೆ. ಐದು ಕಲಾಭವನಗಳು ಈಗಾಗಲೇ ಇದೆ. ಹುಬ್ಬಳ್ಳಿಯಲ್ಲಿ ಎರಡು ಕಲಾ ಮಂದಿರಗಳು ಇದೆ. ಮಾಳ ಮಡ್ಡಿಯಲ್ಲಿ ಐವತ್ತು ಸಾವಿರ ರೂಪಾಯಿಗಳನ್ನು ಬಯಲು ರಂಗಮಂದಿರ ನಿರ್ಮಾಣಕ್ಕೆ ಕೊಟ್ಟಿದ್ದೇವೆ. ಮತ್ತು ರೊಟ್ಟಿಗಾಡ, ಕಲಗಟಗಿ, ರಾಯನಾಡ್, ದರ್ಶಾಪುರ್, ಮನ್‌ಸೂರ್ ಮತ್ತು ಅಮೀವನ್‌ಬಾವಿ ಇಲ್ಲಿ ರಂಗ ಮಂದಿರ ನಿರ್ಮಿಸಲು ನಾಲ್ಕು ಲಕ್ಷ ರೂಪಾಯಿಗಳ ಧನಸಹಾಯವಾಗಿದೆ. ಜಿಲ್ಲೆಗೆ ಒಂದು ರಂಗ ಮಂದಿರ ಕೊಡಬೇಕೆಂಬುದು ಸರ್ಕಾರದ ಉದ್ದೇಶವಿದೆ.

ಕರ್ನಾಟಕದ ಸುವರ್ಣ ಜಯಂತಿಯ ಅಂಗವಾಗಿ ಪ್ರತಿಯೊಂದು ಜಿಲ್ಲೆಯಲ್ಲಿ ರಂಗ ಮಂದಿರವನ್ನು ಕಟ್ಟಿಸಬೇಕೆಂದು ಆಗಿದೆ. ಇದು ಪ್ರತಿಯೊಂದು ಜಿಲ್ಲೆಯಲ್ಲಿ ಮುಗಿಯುತ್ತಾ ಬರುತ್ತಿದೆ. ಇಲ್ಲೂ ಸಹ ನಾವು ಕೊಡುತ್ತಿದ್ದೇವೆ. ಇಲ್ಲಿ ವಿಶೇಷವಾಗಿ ಪಾಟೀಲ್‌ಪುಟ್ಟಪ್ಪನವರ ಹೆಸರಿನಲ್ಲಿರುವ ಕಲಾ ಮಂದಿರಕ್ಕೆ ಬೇರೆ ಕಡೆ ಕೂಡ ಹೆಚ್ಚಿನ ಹಣವನ್ನು ಕೊಟ್ಟು ಮಾಡಿದ್ದೇವೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಮಾನ್ಯ ಅಧ್ಯಕ್ಷರೆ, ಅವರು ಏನು ಪ್ರಶ್ನೆ ಕೇಳಿದ್ದಾರೆಂದರೆ, ಧಾರವಾಡ ಜಿಲ್ಲೆ ಸಾಂಸ್ಕೃತಿಕವಾಗಿ ಗ್ರಾಮೀಣ ಭಾಗದಲ್ಲಿ ಬೆಳೆದಿರುವಂಥ ಜಿಲ್ಲೆ. ಧಾರವಾಡ ಮತ್ತು ಹುಬ್ಬಳ್ಳಿಯಲ್ಲಿರುವ ಮಂದಿರಗಳ ಬಗ್ಗೆ ಮಾಹಿತಿ ಕೊಟ್ಟಿದ್ದೀರಿ, ಅದು ನಿಜ. ಗ್ರಾಮೀಣ ಪ್ರದೇಶಕ್ಕೆ ಮತ್ತು ತಾಲ್ಲೂಕು ಕೇಂದ್ರಗಳಿಗೆ ಅಂಥ ಕಡೆ ಏನಾದರೂ ಈ ರೀತಿ ಕಲಾ ಮಂದಿರಗಳನ್ನು ಮಾಡಿ ಅಲ್ಲಿನ ಕಲೆಯನ್ನು ಉಳಿಸಲು ಆಗುತ್ತದೆಯೇ ಎಂದು ಅವರು ಕೇಳಿದ್ದಾರೆ, ಅದಕ್ಕೆ ಸ್ಪಷ್ಟವಾದ ಉತ್ತರವನ್ನು ತಾವು ಕೊಡಬೇಕು.

ಶ್ರೀ ಧರ್ಮಸಿಂಗ್ : ಧಾರವಾಡ ಜಿಲ್ಲೆಯಲ್ಲಿರುವ ಬಗ್ಗೆ ಹೇಳಿದ್ದೇನೆ. ಹುಬ್ಬಳ್ಳಿ ಮತ್ತು ಬೇರೆ ಬೇರೆ ಕಡೆಗೆ ಎಷ್ಟು ಹಣವನ್ನು ಕೊಟ್ಟಿದ್ದೇವೆ ಎಂಬ ಬಗ್ಗೆ ಹೇಳಿದ್ದೇನೆ. ಅದರಲ್ಲಿ ಮನ್ಸೂರ್, ಅಮೀಮ್‌ಬಾವಿ, ರೆಟ್ಟಿವಾಡದಲ್ಲಿದೆ ಕಲಘಟಗಿಯಲ್ಲಿದೆ, ರಾಯನಾಡ್‌ದಲ್ಲಿದೆ, ದರ್ಶಾಪುರ್‌ನಲ್ಲಿದೆ, ಇವೆಲ್ಲಾ ರಂಗ ಮಂದಿರಕ್ಕೆ ನಾಲ್ಕು ಲಕ್ಷ ರೂಪಾಯಿ ಧನ ಸಹಾಯ ಕೊಟ್ಟಿದ್ದೇವೆ.

ಶ್ರೀ ಅಕ್ಕಿಮಲ್ಲಿಕಾರ್ಜುನ ಸಹದೇವಪ್ಪ : ಧಾರವಾಡ ಜಿಲ್ಲೆಯ ಬಗ್ಗೆ ಹೇಳಿದ್ದಾರೆ. ನಾಲ್ಕೈದು ಲಕ್ಷ ರೂಪಾಯಿಗಳು ಎಲ್ಲಾದಕ್ಕೂ ಸಾಕಾಗುವುದಿಲ್ಲ. ಎಲ್ಲಾ ಗ್ರಾಮಗಳಿಗೂ ಮಾಡಲು ಕನಿಷ್ಟ ಒಂದು ಕೋಟಿ ರೂಪಾಯಿಯಾದರೂ ಬಿಡುಗಡೆ ಮಾಡಬೇಕು.

ಅಧ್ಯಕ್ಷರು : ಈಗ ಲಿಖಿತ ಮೂಲಕ ಉತ್ತರಿಸುವ.....

ಶ್ರೀ ಎಸ್.ಎಸ್. ಪಾಟೀಲ್ : ಮಾನ್ಯ ಅಧ್ಯಕ್ಷರೆ, ತಡೆಹಿಡಿಯಲಾದ ಪ್ರಶ್ನೆಗಳಲ್ಲಿ ನನ್ನ ಪ್ರಶ್ನೆಯನ್ನು ಕೇಳುತ್ತೇನೆ, ಗ್ರಾಮೀಣ ಕೃಪ ಬಹಳ ಮಹತ್ವದ್ದು ಒಂದು ಐದು ನಿಮಿಷಗಳಲ್ಲಿ ಕೇಳಿಬಿಡುತ್ತೇನೆ.

ಅಧ್ಯಕ್ಷರು : ಪ್ರಶ್ನೋತ್ತರ ಆರಂಭವಾಗಿ ಈಗಾಗಲೇ ಎರಡು ಗಂಟೆಗಳಾಗಿವೆ. ಇನ್ನೂ ಮೂರು ಆ ರೀತಿ ಪ್ರಶ್ನೆಗಳು ಇದ್ದಾವೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಅವಕಾಶ ಕೊಟ್ಟುಬಿಡಿ. ನೇರವಾಗಿ ಪ್ರಶ್ನೆ ಕೇಳಲು ಅವಕಾಶ ಕೊಟ್ಟುಬಿಡಿ.

ಅಧ್ಯಕ್ಷರು : ಇದೇ ರೀತಿಯಾದರೆ ಬಹಳ ಕಷ್ಟವಾಗುತ್ತದೆ. ಇವತ್ತೇನೋ ನಿಜ ಮೂರು ಪ್ರಶ್ನೆಗಳು ಇದ್ದಾವೆ, ಅವಕಾಶ ಕೊಟ್ಟುಬಿಡುತ್ತೇನೆ, ಆದರೆ ಇದೇ ರೀತಿ ಪ್ರತಿ ದಿನ ಆದರೆ ಕಷ್ಟವಾಗುತ್ತದೆ.

ವಿಧಾನಸೌಧ ಬಡಾವಣೆಯಿಂದ ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಗಳ ಬಸ್‌ಗಳನ್ನು ವೇಳಾಪಟ್ಟಿಯಂತೆ ಓಡಿಸುವ ಬಗ್ಗೆ

(889) ಶ್ರೀ ಬಸವರಾಜ ಭೀಮಪ್ಪ ಹಿತ್ನಾಳ್ ಕೆ. : ಮಾನ್ಯ ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೆಂಗಳೂರು ನಗರದ ದಾಸರಹಳ್ಳಿ ನಗರ ಸಭೆ ವ್ಯಾಪ್ತಿಯಲ್ಲಿ ಬರುವ ವಿಧಾನಸೌಧ ಬಡಾವಣೆಯಿಂದ ಕೃಷ್ಣ ರಾಜೇಂದ್ರ ಮಾರುಕಟ್ಟೆ ಬೆಂಗಳೂರು ಬಸ್ ನಿಲ್ದಾಣಕ್ಕೆ ಓಡಾಡುತ್ತಿರುವ